ಮನೆಯಲ್ಲಿರುವ ಹಕ್ಕನ್ನು ಕಳೆದುಕೊಂಡಿದ್ದಾಳನ್ನಲೆ! ಹಾಗೆನ್ನಲು ಕಾನೂನಿನ ರೀತ್ಯ ನನಗೂ ಸಾಧ್ಯವಿರಲಿಲ್ಲ. ನಾವಿಬ್ಬರೂ ಬೇರಾಗಿದ್ದರೂ ವಿಚ್ಛೇದಿತರಾಗಿರಲಿಲ್ಲವಲ್ಲ. ವಿಚ್ಛೇದನದ ಅಗತ್ಯ ನನಗಾದರೂ ಎಲ್ಲಿತ್ತು? ಭಾವ ಅಕ್ಕ ಮಾತ್ರ ಅನೇಕ ಬಾರಿ "ಆ ಲೌಡೀಗೆ ಡಿವೋರ್ಸ್ ಕೊಟ್ಟು ಬಿಡು, ನೆಮ್ಮದಿಯಾಗಿ ಒಂದು ಮದ್ವೆ ಮಾಡ್ಕೋಬಹುದು. ನೀನು ಹೂಂ ಅಂದ್ರೆ ದಮ್ಮಯ್ಯ ಅಂತ ಹೆಣ್ಣು ಕೊಡ್ತಾರೆ" ಅಂತ. ಕೊಡುವವರಿರಬಹುದು... ಮಾಡಿಕೊಳ್ಳುವ ಮನಸ್ಸೇ ಬರದಿದ್ದರೆ...

ಡಿವೋರ್ಸ್ ಅವಳೂ ಕೇಳಲಿಲ್ಲ ನಾನೂ ಕೊಡಲಿಲ್ಲ. ಅವಳ ಮೇಲೆ ಕೋಪ ಅಸಹ್ಯ ತಿರಸ್ಕಾರ ಯಾವುದೂ ಹುಟ್ಟಲಿಲ್ಲವೆಂದರೆ... ಮಸ್ತಾನಿ ಮಾತ್ರ ಹೇಳುತ್ತಿದ್ದ, "ಗೋರೆ ರಾಂಡ್! ನಾನಾಗಿದ್ರೆ ಸಾಣೆ ಹಿಡಿದ ಮಚ್ಚು ತಗೊಂಡೋಗಿ ಕೊಚ್ಚಿಹಾಕಿ ಬರುತ್ತಿದ್ದೆ. ನೀವೇನು ಭಾಯಿ ಸುಮ್ಮನೆ ಬಿಟ್ಟು ಬಿಟ್ಟಿದ್ದೀರ ಅವಳನ್ನ" ಅಂತ. ಇಲ್ಲ ಅವಳನ್ನು ಕೊಚ್ಚಲು–ಚಚ್ಚಲು ಕಡೆಯ ಪಕ್ಷ ಮನಸ್ವಿ ಬೈಯ್ಯಲಾದರೂ ನನಗೆ ಮನಸ್ಸಾಗಲಿಲ್ಲ. ಈಗಿವಳು ಇಲ್ಲಿಗೆ ಯಾಕೆ ಬಂದಿರಬಹುದು. ಬಂದವಳು ಬಂದಳು. ಪಾಪುವನ್ನು ಯಾಕೆ ಕರೆತರಲಿಲ್ಲವೋ? ಮನಸ್ಸು ತಡೆಯಲಿಲ್ಲ "ಪಾಪು?" ಎಂದೆ. ಫಳಕ್ಕನೆ ಕಣ್ಣುಗಳಲ್ಲಿ ನೀರ್ದುಂಬಿಕೊಂಡು ತಲೆ ತಗ್ಗಿಸಿದಳು. "ಯಾಕೆ? ಪಾಪು ಚೆನ್ನಾಗಿದ್ದಾಳೆ ತಾನೆ?" ಎಂದೆ. "ಹೂಂ" ಎಂದಳು ಚುಟುಕಾಗಿ. ಯಾಕೋ ಏನೋ ಸರಿಯಿಲ್ಲವೆನಿಸಿತು. ಇವಳ ನೂರು ಅಪರಾಧಗಳನ್ನು ಕ್ಷಮಿಸಿಬಿಟ್ಟಿದ್ದೆ. ಕ್ಷಮಿಸಲಾರದ್ದು ಒಂದನ್ನು ಮಾತ್ರ, ಅಷ್ಟು ಪರಿಯಲ್ಲಿ ಕೇಳಿಕೊಂಡಿದ್ದೆ. ಪಾಪುವನ್ನು ನನಗೆ ಹಿಂತಿರುಗಿಸಿಬಿಡು ಅಂತ. ಕೇಳಲಿಲ್ಲ. ದುಷ್ಟ ಹೆಂಗಸು, ಶನಿ, ಪೀಡೆ ನನಗೆಲ್ಲಿ ಗಂಟುಬಿದ್ದಳು? ಗಂಟು ಬೀಳುವುದೆಂದರೇನು? ನಾನೇ ಅರಸಿ ಬಯಸಿ ಹಂಬಲಿಸಿದ ಹೆಣ್ಣಲ್ಲವೆ ಇವಳು? ನನ್ನ ವಿದ್ಯೆ, ಉದ್ಯೋಗ, ಮನೆ, ಕಾರು ಮಾತ್ರವಲ್ಲ. ನೋಡಲು ತುಂಬಾ ಚೆಂದವೆಂದುಕೊಂಡು ನನ್ನನ್ನೊಪ್ಪಿ ಒಲಿದವಳಿವಳು. ಮೇಡ್‌ಫಾರ್ ಈಚ್ ಅದರ್– ಕರುಬುವಂತಿದ್ದ ಜೋಡಿ. ಎಲ್ಲಿ ತಪ್ಪಾಯಿತು? ಯಾಕೆ ಹೀಗಾಯಿತು? ಕಣ್ಣ ಗೊಂಬೆಯಂತಿದ್ದ ಮಗಳು, ಅಮ್ಮನಂತಿದ್ದ ಅತ್ತೆ, ಅವಳ ಹೊರತು ಬೇರೊಬ್ಬಳನ್ನು ಕನಸಲ್ಲೂ ಕಾಣಲಾರದ ನನ್ನಂತಿನ ಗಂಡ... ಯಾವ ಕಾರಣವಿತ್ತು ಸುಶೀಲೆಗೆ?

ಆ ದಿನ...

ಅವಳಿಲ್ಲದ ಆ ಬೆಳಗ್ಗೆ ನಾನು ಅಲ್ಲಿ ಇಲ್ಲಿ ಫೋನು ಹಚ್ಚಿ ಕೇಳತೊಡಗಿದ್ದೆ. ವಾಕಿಂಗ್‌ನಲ್ಲೇನಾದರೂ ಬಿದ್ದಳೆ, ಆಕ್ಸಿಡೆಂಟೇ... ಹಿಟ್ ಅಂಡ್ ರನ್ ಕೇಸೇ... ಎಷ್ಟೆಲ್ಲ ತಲ್ಲಣಗಳು... ಅಮ್ಮ ಮಾತ್ರ ದುಮ್ಮಾನದಿಂದ ನಡುಮನೆಯ ಸೋಫಾದಲ್ಲಿ ಕುಳಿತಿದ್ದವಳು... ಮಧ್ಯಾಹ್ನದವರೆಗೆ ಏಳಲೇ ಇಲ್ಲ. ಅಲ್ಲಿ ಇಲ್ಲಿ ಎಲ್ಲೆಡೆ ಹುಡುಕಿದರೂ ಸುಳಿವು, ಪತ್ತೆ ಇರದ ಮೇಲೆ ಹತಾಶನಾಗಿ ಕುಳಿತಾಗ...

"ಶಂಕ್ರೂ... ಎದುರು ಮನೆ ಟೇಲರ್ ಅಂಗಡಿ ತೆಗೆದಿದ್ಯಾ ನೋಡು" ಎಂದಳು. ಅಚ್ಚರಿಯಿಂದ "ಅಯ್ಯೋ ಏನಮ್ಮ ನೀನು? ಎಲ್ಲಾ ಬಿಟ್ಟು ಈಗ ಟೇಲರ್ ಅಂಗಡಿ ನೋಡಲಾ?" ಎಂದಿದ್ದೆ.

"ಮುಂಚೇನೇ ನೋಡ್ಕೋಬೇಕಿತ್ತು ಕಣಪ್ಪಾ, ಈಗಲಾದ್ರೂ ನೋಡು ಆ ಮುಂಡೆಮಗ ಬಾಗಿಲು ತೆಗೆದಿದ್ದಾನಾ ಅಂತ" ಎಂದಳು. ಎಲ್ಲವೂ ಅಯೋಮಯವೆನಿಸಿತು. 'ರಾಗಾ ಫ್ಯಾಷನ್ ಡಿಸೈನರ್ಸ್' ಎಂದು ಬರೆದ ಕೆಂಪು ಬಣ್ಣದ ಅಕ್ಷರಗಳ ಬಿಳಿ ಸೈನ್ ಬೋರ್ಡಿನ ಕೆಳಗಿನ ರೋಲಿಂಗ್ ಶಟರ್ ಬೀಗ ಹಿಡಿಸಿಕೊಂಡು ಬೆಚ್ಚಗೆ ಕುಳಿತಿತ್ತು. ನನ್ನ ತಲೆಯೊಳಗೆ ವಿದ್ಯುತ್ ಪ್ರವಾಹ ಹರಿದಂತಾಗಿ "ಅಮ್ಮಾ ಏನಮ್ಮ? ಅವನು..." ಎನ್ನುವಷ್ಟರಲ್ಲಿ ಕಣ್ಣು ಕತ್ತಲಿಟ್ಟುಕೊಂಡಿತ್ತು.

"ಹೂಂನಪ್ಪಾ. ಅವನ್ನ ಕಂಡ್ರೆ ಇವಳ ಥಳುಕು–ಬಳುಕೇನು? ವೈಯ್ಯಾರವೇನು? ನಲಿದಾಡ್ತಿದ್ಲು